Spl. Case No.534/2019
PW.1, CW.1

ದಿನಾಂಕ : 30-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:ಶ್ರೀ.ಬಿ.ಜೆ.ಜಿ ವಕೀಲರಿಂದ ಆರೋಪಿತರ ಪರ**

ನಾನು ಸ್ವಂತ ಊರು ನಿಪನಾಳ. ಮೂಡಲಗಿಯಲ್ಲಿ ನನ್ನ ತವರುಮನೆ ಇದೆ. ನಿಡಗುಂದಿಯಲ್ಲಿ ನಾನು, ನನ್ನ ಗಂಡ ಮತ್ತು ಮಕ್ಕಳು ವಾಸ ಇದ್ದೇವು. ನಾನು ಮತ್ತು ನನ್ನ ಕುಟುಂಬ ಕೆಂಪಟ್ಟಿ ಗ್ರಾಮದಲ್ಲಿ ವಾಸ ಇದ್ದೇವು ಎನ್ನುವುದು ಸರಿಯಲ್ಲ. ನಾನು ಮತ್ತು ನನ್ನ ಕುಟುಂಬ ಹುಬ್ಬರವಾಡಿ ಗ್ರಾಮದಲ್ಲಿ ವಾಸ ಇದ್ದೇವು ಎನ್ನುವುದು ಸರಿ. ಅಲ್ಲಿಂದ ನಾವು ರಾಯಬಾಗಕ್ಕೆ ಬಂದು ವಾಸ ಇದ್ದೇವೆ ಎನ್ನುವುದು ಸರಿ.

2. ಇದೇ ನ್ಯಾಯಾಲಯದಲ್ಲಿ ನಡೆಯುತ್ತಿರುವ ಮೂರು ಪ್ರಕರಣಗಳಲ್ಲಿ ನಾನು ಆರೋಪಿಯಾಗಿದ್ದು, ಮೂರು ಪ್ರಕರಣಗಳಲ್ಲಿ ಸಾಕ್ಷಿದಾರಳಾಗಿದ್ದೇನೆ ಎನ್ನುವುದು ಸರಿಯಲ್ಲ. ಈ ಹಿಂದೆ ಇದೇ ನ್ಯಾಯಾಲಯದಲ್ಲಿ ಸ್ಪೇಶಲ್ ಕೇಸ 66/2015, ಸ್ಪೇಶಲ್ ಕೇಸ 138/2016 ಎಂದು ನನ್ನ ಮೇಲೆ ಕೇಸ ನಡೆದಿತ್ತು ಅವುಗಳಲ್ಲಿ ನನ್ನನ್ನು ಖುಲಾಸೆಗೊಳಿಸಲಾಗಿದೆ ಎನ್ನುವುದು ಸರಿ. ನನ್ನ ಗಂಡ ಸ್ಪೇಶಲ್ ಕೇಸ 66/2015 ರಂತೆ ಕೇಸು ನೀಡಿದ್ದು ನಾನು ಅದರಲ್ಲಿ ಸಾಕ್ಷಿ ಹೇಳಿದ್ದೇನು ಎನ್ನುವುದು ಸರಿಯಲ್ಲ.

3. ಹುಬ್ಬರವಾಡಿ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ಸುಮಾರು 10-12 ವರ್ಷ ವಾಸ ಇದ್ದೇನು. ನಮ್ಮ ಮನೆ ಮತ್ತು ಆರೋಪಿತರ ಮನೆ ಅಥವಾ ಜಮೀನುಗಳು ಒಂದಕ್ಕೊಂದು ಹೊಂದಿಕೊಂಡಂತೆ ಇಲ್ಲ ಎನ್ನುವುದು ಸರಿ. 1 ರಿಂದ 3 ನೇ ಆರೋಪಿತರು ಅವರ ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸ ಇದ್ದಾರೆ ಎನ್ನುವುದು ಸರಿ. 4 ಮತ್ತು 6 ನೇ ಆರೋಪಿತರ ಮನೆಯ ಮುಂಭಾಗದಿಂದ ನಾವು ನಮ್ಮ ಮನೆಗೆ ಹೋಗಬೇಕು ಎನ್ನುವುದು ಸರಿ. ನಾವು ಹುಬ್ಬರವಾಡಿಯಲ್ಲಿ ವಾಸ ಇದ್ದ ಮನೆಯ ಜಾಗವನ್ನು ಸರ್ಕಾರದವರು ನಮಗೆ

ಮಂಜೂರು ಮಾಡಿದ್ದರು ಎನ್ನುವುದು ಸರಿ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಾನೆ. ಘಟನೆ ನಡೆಯಿತು ಎಂದು ಹೇಳುವ ದಿನ ಮನೆ ಕಟ್ಟಲು ಪಾಯ ಹಾಕುವ ಸಲುವಾಗಿ ಟ್ರ್ಯಾಕ್ಟರನಿಂದ ಕಲ್ಲುಗಳನ್ನು ತಂದು ನಮ್ಮ ಮನೆಯ ಪಕ್ಕದಲ್ಲಿ ಸುರಿಸುತ್ತಿದ್ದೇವು.

4. 4 ನೇ ಆರೋಪಿ ಬಾಲಕೃಷ್ಣ ಮತ್ತು 6 ನೇ ಆರೋಪಿ ಸೋಮನಕಾಕ ಅವರಿಗೂ ಮತ್ತು ನಮಗೆ ವೈಯಕ್ತಿಕ ಜಗಳ ಇಲ್ಲ ಎನ್ನುವುದು ಸರಿ. 4 ಮತ್ತು 6 ನೇ ಆರೋಪಿತರು 1 ರಿಂದ 3 ನೇ ಆರೋಪಿತರಿಗೆ ಸಹಾಯ ಮಾಡುತ್ತಾರೆ ಎನ್ನುವ ಕಾರಣಕ್ಕೆ ನಮಗೆ ಅವರ ಮೇಲೆ ಸಿಟ್ಟಿದೆ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಈ ಪ್ರಕರಣದಲ್ಲಿ 4 ಮತ್ತು 6 ನೇ ಆರೋಪಿತರು 1 ರಿಂದ 3 ನೇ ಆರೋಪಿತರಿಗೆ ಸಹಾಯ ಮಾಡಿದ್ದಾರೆ ಎಂದು ಹೇಳಿದ್ದಾರೆ.

5. 6 ನೇ ಆರೋಪಿ, 1 ರಿಂದ 3 ನೇ ಆರೋಪಿತರ ಜಮೀನಿನಲ್ಲಿ ಕೆಲಸಕ್ಕೆ ಹೋಗುತ್ತಾರೆ ಎನ್ನುವುದು ಸರಿ. ಮನೆ ಕಟ್ಟಲು ಪಾಯ ಹಾಕುವ ಸಲುವಾಗಿ ಟ್ರ್ಯಾಕ್ಟರನಿಂದ ಕಲ್ಲುಗಳನ್ನು ತಂದು ನಮ್ಮ ಮನೆಯ ಪಕ್ಕದಲ್ಲಿ ಸುರಿಸುತ್ತಿದ್ದ ಸಮಯದಲ್ಲಿ ನಮಗೂ ಆರೋಪಿತರಿಗೂ ಜಗಳ ಆಯಿತು ಎನ್ನುವುದು ಸರಿಯಲ್ಲ. 1 ರಿಂದ 3 ನೇ ಆರೋಪಿತರು ಸ್ಥಳಕ್ಕೆ ಬಂದು ನೀವು ಇಲ್ಲಿ ಇರಬೇಡಿರಿ,ನೀವು ಕೀಳು ಜಾತಿಯವರು, ನೀವು ಕೊರವರು ಎಂದು ಜಾತಿ ಹೆಸರು ಹಿಡಿದು ಅವಾಚ್ಯ ಶಬ್ದಗಳಿಂದ ಬೈದರು ಎಂದು, 1 ನೇ ಆರೋಪಿ, ನನ್ನ ಗಂಡನಿಗೆ ಶರ್ಟ ಹಿಡಿದು ಜಗ್ಗಾಡಿ ಕೈಯಿಂದ ಹೊಡೆದಿರುತ್ತಾನೆ, ನನ್ನ ಗಂಡ ಕೆಳಗೆ ಬಿದ್ದಾಗ ಹೊರಳಾಡಿಸಿ ಕಾಲಿನಿಂದ ಒದ್ದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ. 2 ನೇ ಆರೋಪಿ ಸಿದ್ದಪ್ಪ ಕೊಟ್ರೆ ಕುಡಗೋಲ ತಂದು ನನ್ನ ಗಂಡನ ಎರಡೂ ಭುಜಗಳಿಗೆ, ತಲೆಗೆ ಹೊಡೆದಿರುತ್ತಾರೆ ಎಂದು, ನನ್ನ ಗಂಡನಿಗೆ ರಕ್ತ ಸುರಿಯುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

6. 3 ನೇ ಆರೋಪಿ ವಿಠ್ಠಲ ನಮ್ಮ ಮನೆಯ ಮುಂದೆ ಇದ್ದ ಸೈಕಲ ಪಂಪ್ ತೆಗೆದುಕೊಂಡು ಬಂದು ನನ್ನ ಗಂಡನ ಬೆನ್ನಿಗೆ,ರಟ್ಟೆಗೆ, ತಲೆಯ ಹಿಂಭಾಗಕ್ಕೆ , ಕೈಗೆ, ಕಾಲಿಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

7. ನನ್ನ ಇಬ್ಬರೂ ಸಣ್ಣ ಮಕ್ಕಳಿಗೂ ಸಹ ಆರೋಪಿತರು ಹೊಡೆಯುತ್ತಾರೆ ಎಂದು ಹೇಳಿ ಅವರನ್ನು ಹೊಲದ ಕಡೆಗೆ ಕಳುಹಿಸಿ ನಾನು ನನ್ನ ಗಂಡನನ್ನು ಬಿಡಿಸಲು ಪ್ರಯತ್ನ ಮಾಡುತ್ತಿದ್ದಾಗ 1 ರಿಂದ 3 ನೇ ಆರೋಪಿತರು ನನ್ನ ತಲೆಯ ಕೂದಲು ಹಿಡಿದು ಜಗ್ಗಾಡಿ, ಸೀರೆ ಹಿಡಿದು ಎಳೆದಾಡಿರುತ್ತಾರೆ ಎಂದು, ಕಬ್ಬಿಣದ ಸರಳಿನಿಂದ ನನ್ನ ಬಲಗಾಲಿಗೆ ಮತ್ತು ಸೊಂಟಕ್ಕೆ ಹೊಡೆದಿರುತ್ತಾರೆ ಎಂದು, ಸೈಕಲ್ ಪಂಪ್ ರಾಡ್‌ನಿಂದ 4 ನೇ ಆರೋಪಿ ನನ್ನ ಬಲಗೈಗೆ, ಬೆನ್ನಿಗೆ ಮತ್ತು ತೋಡೆಗೆ ಹೊಡೆದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

8. 6 ನೇ ಆರೋಪಿ ಸೋಪನಕಾಕಾ ಅವರು ನನ್ನ ತಲೆ ಕೂದಲು ಹಿಡಿದು ಜಗ್ಗಾಡಿರುತ್ತಾರೆ ಮತ್ತು ನನ್ನ ಗಂಡನಿಗೆ ಹೊಡೆದಿರುತ್ತಾರೆ, ನನ್ನ ಗಂಡ ಪ್ರಜ್ಞೆ ತಪ್ಪಿ ಬಿದ್ದಿದ್ದನು, ಅದಕ್ಕೆ ಆತನು ತೀರಿಕೊಂಡನು ಎಂದು ಭಾವಿಸಿ ಆರೋಪಿತರು ಹೊರಟು ಹೋದರು, ನನ್ನ ಗಂಡನಿಗೆ ಪ್ರಜ್ಞೆ ಬಂದಾಗ 6 ನೇ ಆರೋಪಿ ಸೋಪನಕಾಕಾ ಪುನಃ ನನ್ನ ಗಂಡನಿಗೆ ಕಬ್ಬಿಣದ ರಾಡ್‌ನಿಂದ ಹೊಡೆದಿರುತ್ತಾರೆ, ನನ್ನ ಗಂಡನನ್ನು ಕೊಲೆ ಮಾಡಲೇಬೇಕು ಎನ್ನುವ ಉದ್ದೇಶದಿಂದ ಅವರು ಆ ರೀತಿ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

9. ಘಟನೆಯನ್ನು ಟ್ರ್ಯಾಕ್ಟರನಲ್ಲಿ ಕಲ್ಲು ತಂದಿದ್ದಂತಹ ಟ್ರ್ಯಾಕ್ಟರ ಡ್ರೈವರ ಅವರು ಗೋಪಾಲ ಬಿದರಿ ಅವರು ನೋಡಿರುತ್ತಾರೆ ಎಂದು ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಕೃತ್ಯಕ್ಕೆ ಬಳಸಿದ ಕುಡಗೋಲು, ಸೈಕಲ ಪಂಪ್‌ನ ಕಬ್ಬಿಣದ ಹೊರಗಿನ ಭಾಗವನ್ನು

ಆರೋಪಿತರು ತೆಗೆದುಕೊಂಡು ಹೋದರು, ಸೈಕಲ ಪಂಪ್‌ನ ಒಳಭಾಗವನ್ನು ನಮ್ಮ ಮನೆಯ ಮುಂದೆ ಬಿಸಾಡಿ ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ.

10. ಆರೋಪಿತರು ನಮಗೆ ಕಲ್ಲಿನಿಂದ ಸಹ ಹೊಡೆದಿರುತ್ತಾರೆ. ಸಿದ್ದಪ್ಪ ಕೊಟ್ರೆ ಮತ್ತು ವಿಠ್ಠಲ ಕೊಟ್ರೆ ನನ್ನ ಮಕ್ಕಳಿಗೂ ಸಹ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿ ಯಲ್ಲ.

11. ನಾನು ನನ್ನ ಗಂಡನಿಗೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆಗುವುದಿಲ್ಲ, ನೀವು ಮಿರಜ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿ ಅಂಬ್ಯುಲೆನ್ಸನಲ್ಲಿ ಮಿರಜ ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದರು ಎಂದು, ಅಲ್ಲಿ ನನ್ನ ಗಂಡ ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದನು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

12. ನಾನು ದೂರನ್ನು ರಾಯಬಾಗ ಕೋರ್ಟನ ಮುಂಭಾಗದಲ್ಲಿ ಟೈಪ್ ಮಾಡಿಸಿದ್ದೇನೆ. ಆ ಸಮಯದಲ್ಲಿ ನನ್ನ ಗಂಡ ಆಸ್ಪತ್ರೆಯಲ್ಲಿ ಇದ್ದನು.

13. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ನಾನು ಜನರಿಗೆ ತೊಂದರೆ ಕೊಡುವುದು, ಸುಳ್ಳು ದೂರು ನೀಡುವ ಪ್ರವೃತ್ತಿ ಹೊಂದಿದ್ದು, ಅದೇ ರೀತಿ ಆರೋಪಿತರ ಮೇಲೆ ದೂರು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಪೋಲಿಸರು ಸ್ಥಳಕ್ಕೆ ಭೇಟಿ ನೀಡಿ ಪಂಚನಾಮೆ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

14. ನಾನು ರಾಯಬಾಗ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಮು.ಮಾ.3 ರಂತಹ ಕುಡಗೋಲು ಸಾಮಾನ್ಯವಾಗಿ ಎಲ್ಲಾ ರೈತರ ಮನೆಗಳಲ್ಲಿ ಇರುತ್ತದೆ ಎನ್ನುವುದು ಸರಿ. ಮು.ಮಾ.2 ರಂತಹ ಕಲ್ಲು ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿ ಇರುತ್ತದೆ ಎನ್ನುವುದು ಸರಿ.

15. ನಾನು ಆರೋಪಿತರ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.